# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:01-10-2022 ರಂದು ಅಕ್ಟೋಬರ್-2022 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, Hot mix plant, 80 feet road, ಈಜೀಪುರ, ಬೆಂಗಳೂರು ರಲ್ಲಿ ದಿನಾಂಕ:01.10.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಡಾ. ಪ್ರಕಾಶ್ ರೆಡ್ಡಿ
2. ಶ್ರೀಮತಿ ಗಂಗಾಂಬಿಕೆ
3. ಶ್ರೀ ವಸಂತಕುಮಾರ್
4. ಶ್ರೀ ಪಿ. ಚಂದ್ರ ಕುಮಾರ್
5. ಶ್ರೀ ಲಕ್ಷ್ಮೀಪತಿ
6. ಶ್ರೀ ಆರ್. ಪ್ರದೀಪ್
7. ಶ್ರೀ ಎಂ. ರಾಜೇಂದ್ರಬಾಬು
8. ಶ್ರೀ ಎಂ.ಎಸ್. ಗಣೇಶ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
3. ಶ್ರೀ ಸಂತೋಷ್ .ಎಂ., ಸಹಾಯಕ ಅಭಿಯಂತರರು
4. ಶ್ರೀ ರಂಗಯ್ಯ ಡಿ.ಎಸ್. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
6. ಶ್ರೀಮತಿ ನಂದಿನಿ .ಎಂ, ಪಿ.ಎಸ್.ಐ, ವಿವೇಕಾನಗರ ಪೋಸ್ಟ್
7. ಶ್ರೀ ಎನ್. ನಾಗರಾಜ್, ಸೂಪರ್‌ವೈಸರ್, ಬಿ.ಬಿ.ಎಂ.ಪಿ.

* * * * *

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ಶ್ರೀ ವಸಂತ್ ಕುಮಾರ್ ರವರು ಮಾತನಾಡಿ, ಶ್ರೀನಿವಾಗಿಲು ಸಿಗ್ನ್ ಬಳಿ 27ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಹೊರ ವರ್ತುಲ ರಸ್ತೆ ಕಡೆಗೆ ಪ್ರವೇಶದ್ವಾರದಲ್ಲಿ ಕಾಂಕ್ರೀಟ್ ಅಪ್ರೋಚ್ ರ್‍ಯಾಂಪ್ ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಕೋರಮಂಗಲ ಉಪವಿಭಾಗ**



Scanned by CamScanner

ಶ್ರೀಮತಿ ಗಂಗಾಂಬಿಕೆ ರವರು ಮಾತನಾಡಿ, ಪೊಲೀಸ್ ಇಲಾಖಾ ವತಿಯಿಂದ ಸೇಫ್ ಸಿಟಿ ಸ್ಕೀಮ್ ಅಡಿಯಲ್ಲಿ ಶ್ರೀನಿವಾಗಿಲು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲು ಸಭೆಯಲ್ಲಿ ಕೋರಿದರು.

ಶ್ರೀ ಲಕ್ಷ್ಮೀಪತಿ ರವರು ಮಾತನಾಡಿ, ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ, ದೀರ್ಘ ಕಾಲದವರೆಗೆ ರಸ್ತೆಯಲ್ಲಿ ಬಿಟ್ಟಿರುವ ವಾಹನಗಳನ್ನು ವಿಲೇವಾರಿ ಮಾಡುವಂತೆ ಸಭೆಯಲ್ಲಿ ಕೋರಿದರು.

**ಕ್ರಮ: ಆರಕ್ಷಕ ನಿರೀಕ್ಷಕರು,**
**ಅಶೋಕನಗರ ಸಂಚಾರ ಪೊಲೀಸ್ ಠಾಣೆ**

ಶ್ರೀ ವಸಂತ್ ಕುಮಾರ್ ರವರು ಮಾತನಾಡಿ, ಈಜೀಪುರ ವ್ಯಾಪ್ತಿಯಲ್ಲಿ ಅಪರಾಧ ಚಟುವಟಿಕೆ ನಡೆಯುವ ಸ್ಥಳ, ಜನ ದಟ್ಟಣೆ ಇರುವ ಪ್ರದೇಶಗಳಲ್ಲಿ ಅಪರಾಧಗಳನ್ನು ತಡೆಯುವ ದೃಷ್ಟಿಯಿಂದ ಚೀತಾ ಮತ್ತು ಹೊಯ್ಸಳ ವಾಹನಗಳಲ್ಲಿ ಪೊಲೀಸ್ ಸಿಬ್ಬಂಧಿಗಳು ಹೆಚ್ಚು ಗಸ್ತು ತಿರುಗಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಆರಕ್ಷಕ ನಿರೀಕ್ಷಕರು,**
**ವಿವೇಕಾನಗರ ಪೊಲೀಸ್ ಠಾಣೆ**

ಶ್ರೀ ಚಂದ್ರಶೇಖರ್ ರವರು ಮಾತನಾಡಿ, 24ನೇ ಎಫ್ ಅಡ್ಡರಸ್ತೆಯಲ್ಲಿ ಒಳಚರಂಡಿ ಕೊಳವೆಯು ಸದಾಕಾಲ ಉಕ್ಕಿ ಹರಿಯುತ್ತಿದ್ದು, ನಂದಕುಮಾರ್ ಮನೆ ಬಳಿ ಪರ್ಯಾಯವಾಗಿ ಸಂಪರ್ಕ ಕೊಳವೆಯನ್ನು ಅಳವಡಿಸುವ ಬಗ್ಗೆ ಪರಿಶೀಲಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಇಂಜಿನಿಯರ್ ರವರನ್ನು ಒತ್ತಾಯಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ಶ್ರೀ ಪ್ರದೀಪ್ ರವರು ಮಾತನಾಡಿ, 80 ಅಡಿರಸ್ತೆಯಿಂದ ಈಜೀಪುರ ಶ್ರೀರಾಮ ದೇವಸ್ಥಾನ ಮುಖ್ಯರಸ್ತೆಗೆ ಸಂಪರ್ಕಿಸುವ ರಸ್ತೆಯಲ್ಲಿ ಬೃಹತ್ ಮಳೆನೀರುಗಾಲುವೆ ವತಿಯಿಂದ ಆರ್.ಸಿ.ಸಿ. ವಾಲ್ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಈ ಭಾಗದ ಪ್ರದೇಶಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದ್ದು, ತುರ್ತುಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಎಸ್.ಡಬ್ಲ್ಯೂ.ಡಿ**

ಶ್ರೀ ವಸಂತ್ ಕುಮಾರ್ ರವರು ಮಾತನಾಡಿ, ಬುಚ್ಚಪ್ಪ ಬಡಾವಣೆಯ 20ನೇ 'ಸಿ' ಅಡ್ಡರಸ್ತೆಯಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ಹಳೆಯ ಕಾಂಕ್ರೀಟ್ ರಸ್ತೆಯನ್ನು ತೆರವುಗೊಳಿಸಿ, ಹೊಸದಾಗಿ ಕಾಬಲ್ ಸ್ಟೋನ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿರುವುದರಿಂದ ಸದರಿ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕೈಗೊಳ್ಳುವ ಕುಡಿಯುವ ನೀರು ಮತ್ತು ಒಳಚರಂಡಿ ಕೊಳವೆ ಕಾಮಗಾರಿ ಬಾಕಿ ಇದ್ದಲ್ಲಿ ಪರಿಶೀಲಿಸಿ, ಕಾಮಗಾರಿ ಪೂರ್ಣಗೊಳಿಸಬೇಕೆಂದು ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**



Scanned by CamScanner

ಶ್ರೀ ರಾಜೇಂದ್ರಬಾಬು ರವರು ಮಾತನಾಡಿ, ಎಸ್.ಟಿ. ಬೆಡ್ ಪ್ರದೇಶದ 1ನೇ ಮುಖ್ಯರಸ್ತೆಯ ವಸತಿ ಪ್ರದೇಶದಲ್ಲಿ ಭಾರಿ ವಾಹನಗಳಾದ ಟಿಪ್ಪರ್ ಮತ್ತು ಟ್ರ್ಯಾಕ್ಟರ್‌ಗಳು ಸಂಚರಿಸುವುದರಿಂದ ವಸತಿ ಪ್ರದೇಶದ ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿದ್ದು, ಬದಲಿ ಮಾರ್ಗವಾಗಿ 80 ಅಡಿರಸ್ತೆ ಮಾರ್ಗದ ಮುಖಾಂತರ ವಿಪ್ರೋ ಸಿಗ್ನಲ್ ಮತ್ತು ಶಾಂತಿನಗರ ಕೋ ಆಪರೇಟಿವ್ ಸೊಸೈಟಿ ರಸ್ತೆಗೆ ಭಾರಿ ವಾಹನಗಳ ಸಂಚಾರಕ್ಕಾಗಿ ಬದಲಾಯಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು.
**ಅಶೋಕನಗರ ಸಂಚಾರ ಪೊಲೀಸ್ ಠಾಣೆ**

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-148 ಈಜೀಪುರ

(ಶ್ರೀಮತಿ ರೂಪ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-148 ಈಜೀಪುರ



Scanned by CamScanner

ವಾರ್ಡ್ - 148 ಕಲ್ಲಪ್ಪುರ ವಾರ್ಡ್ ಸಮಿತಿ ಸಭೆ

ದಿ = 01/10/2022

ಸಮಯ = 11.00 AM

ಹಾಜರಿದ್ದ ಅಧಿಕಾರಿಗಳು

| | | | |
|---|---|---|---|
| 1) | MUTTU RAJA | J.H.I. | [signature] |
| 2) | Nandini. M. | PSI (Viveknagar PS) | [signature] |
| 3 | ~~Vasantha kumar~~ | ~~9900552547~~ | [signature] |
| 4. | M. Nagaraj | S/D | [signature] |
| 5 | Sreemanth. M | A.E | Shreemanth. M |
| 6 | Rangaiah. DS | AE | [signature] |

ಹಾಜರಿದ್ದ ಸದಸ್ಯರುಗಳು

| | | | |
|---|---|---|---|
| 1. | Dr Prakash Reddy | 9448293121 | [signature] |
| 2. | Gangambike | 9980840470 | [signature] |
| 3 | Vasantha kumar | 9900552547 | [signature] |
| 4. | P. Chandra Kumar | 8217642471 | [signature] |
| 5- | LAKSHMI PATHY | 9886930614 | [signature] |
| 6 | B. PRADEEP | 9845282505 | [signature] |
| 7 | N RAJENDRA BABU | 9945800198 | [signature] |
| 8 | M S GANESH | 9880472597 | |

Scanned by CamScanner